**ಕರ್ನಾಟಕ ಲೋಕಸೇವಾ ಆಯೋಗ**

**"ಉದ್ಯೋಗ ಸೌಧ' ಬೆಂಗಳೂರು-560 001.**

ಸಂಖ್ಯೆ: ಪಿಎಸ್‌ಸಿ 647 ಇ(1)/2022-23 ದಿನಾಂಕ:07-09-2022

## ಅಧಿಸೂಚನೆ

ರಾಜ್ಯೇತರ ಸಿವಿಲ್ ಸರ್ವೀಸ್ (Non State Civil Service) ಹುದ್ದೆಗಳಲ್ಲಿನ ಅಧಿಕಾರಿಗಳನ್ನು 2021ನೇ ಸಾಲಿನ ಭಾರತೀಯ ನಾಗರೀಕ ಸೇವಾ ವೃಂದಕ್ಕೆ ಭಾರತೀಯ ನಾಗರೀಕ ಸೇವಾ (ಆಯ್ಕೆ ಮೂಲಕ ನೇಮಕಾತಿ) ನಿಯಮಾವಳಿಗಳು 1997ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಇ-ಸಿಆಸುಇ 203 ಸೇಆಸೆ 2021, ಬೆಂಗಳೂರು, ದಿನಾಂಕ:10-02-2022 ಹಾಗೂ ತಿದ್ದುಪಡಿಗಳನ್ವಯ ಗ್ರೂಪ್ 'ಎ' ವೃಂದದ ಒಟ್ಟು 04 ಹುದ್ದೆಗಳನ್ನು ಭರ್ತಿ ಮಾಡಲು ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಇಲಾಖೆಯ ಅರ್ಹ ಅಧಿಕಾರಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

1. ಅರ್ಜಿ ಸಲ್ಲಿಸುವಿಕೆ / ಶುಲ್ಕ ಸ್ವೀಕೃತಿ ಕಾಲಮಿತಿ :-

| | |
|---|---|
| ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | 08-09-2022 |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 30-09-2022 |
| ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ | 01-10-2022 |

ತಾತ್ಕಾಲಿಕವಾಗಿ ಪರೀಕ್ಷೆಯನ್ನು ಅಕ್ಟೋಬರ್ ತಿಂಗಳ ಕೊನೆಯ ವಾರದಲ್ಲಿ ನಡೆಸಲಾಗುವುದು. ನಿರ್ದಿಷ್ಟ ದಿನಾಂಕವನ್ನು ನಂತರದಲ್ಲಿ ಪ್ರಕಟಿಸಲಾಗುವುದು.

2. ಅರ್ಜಿಗಳನ್ನು Online ಮೂಲಕವೇ ಭರ್ತಿ ಮಾಡಿ , ಭಾವಚಿತ್ರ/ಸಹಿ/ ವಯೋಮಿತಿ ಮತ್ತು ಸೇವಾವಧಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅಪ್‌ಲೋಡ್ ಮಾಡಿದ ನಂತರ ಶುಲ್ಕವನ್ನು ಯಾವುದೇ ಕಾಮನ್ ಸರ್ವೀಸ್ ಸೆಂಟರ್ ಗಳಲ್ಲಿ (CSC) ಅಥವಾ ನೆಟ್ ಬ್ಯಾಂಕಿಂಗ್ / ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್ ಮೂಲಕ ಸಂದಾಯ ಮಾಡಬಹುದಾಗಿರುತ್ತದೆ. ಶುಲ್ಕವನ್ನು ಪಾವತಿಸದೇ ಹಾಗೂ ದಾಖಲೆಗಳನ್ನು/ ಭಾವಚಿತ್ರ/ ಸಹಿಯನ್ನು ಅಪ್‌ಲೋಡ್ ಮಾಡದೇ ಇರುವ/ಅಸ್ಪಷ್ಟ ದಾಖಲೆಗಳನ್ನು ಅಪ್‌ಲೋಡ್ ಮಾಡಿರುವ ಅಧಿಕಾರಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಶುಲ್ಕವನ್ನು ಕಾಮನ್ ಸರ್ವೀಸ್ ಸೆಂಟರ್ ಗಳಲ್ಲಿ (CSC) ಪಾವತಿಸಲು ಅವಕಾಶ ನೀಡಲಾಗಿರುವುದರಿಂದ ಅರ್ಜಿಗಳನ್ನು ಇಲ್ಲಿಯೂ ಸಹ ಸಲ್ಲಿಸಬಹುದಾಗಿದೆ.

3. ಅರ್ಜಿ ಸಲ್ಲಿಸುವ ಹಂತಗಳು/ಅರ್ಜಿ ಸಲ್ಲಿಸುವ ಪ್ರಕ್ರಿಯೆ

ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಮೂರು ಹಂತಗಳು ಇದೆ.

1. ಮೊದಲನೇ ಹಂತ: Profile Creation/Updation
2. ಎರಡನೇ ಹಂತ : Application Submission
3. ಮೂರನೇ ಹಂತ : Fees Payment through My Application section

ವಿವರವಾದ ಹಂತಗಳು:-

{'*' Marks are mandatory/ ಗುರುತು ಇರುವ ಅಂಕಣಗಳು ಕಡ್ಡಾಯವಾಗಿ ಭರ್ತಿ ಮಾಡಬೇಕು)

If no response found on Save/Add button kindly refresh page (press control +F5)}

- ಹೊಸದಾಗಿ Application Link ರಲ್ಲಿ log in ಆಗಲು user name ಮತ್ತು password ಅನ್ನು ಸೃಷ್ಟಿಸಬೇಕು.
- Application Link ರಲ್ಲಿ log in ಆದ ನಂತರ ನಿಮ್ಮ ಪೂರ್ಣ profile ಅನ್ನು ಭರ್ತಿ ಮಾಡಿ.
- ಅಪ್ಲೋಡ್ ಮಾಡಬೇಕಾದ ಭಾವಚಿತ್ರ ಮತ್ತು ಸಹಿ ಸ್ಕ್ಯಾನ ಪ್ರತಿಗಳನ್ನು jpg ನಮೂನೆಯಲ್ಲಿ ಸಿದ್ದವಾಗಿರಬೇಕು ಹಾಗೂ 50 kb ಗಿಂತ ಹೆಚ್ಚಾಗಿರಬಾರದು.
- ಅಧಿಸೂಚನೆ ಎದುರು ಇರುವ "Click here to Apply" Link ಅನ್ನು ಒತ್ತಿ.
- ನಿಮ್ಮ profile ರಲ್ಲಿ ಲಭ್ಯವಿರುವ ಮಾಹಿತಿಯು ನಿಮ್ಮ ಅರ್ಜಿ ನಮೂನೆಯಲ್ಲಿ ಪ್ರಕಟವಾಗುತ್ತದೆ. ಅರ್ಜಿಯಲ್ಲಿ ಬಾಕಿ ಉಳಿದಿರುವ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸಬೇಕು.
- ಅರ್ಜಿ ಸಲ್ಲಿಸಿದ ನಂತರ "My Application" link ರಲ್ಲಿ ನೀವು ಅರ್ಜಿ ಸಲ್ಲಿಸಿರುವ ಅಧಿಸೂಚನೆಯನ್ನು ಆಯ್ಕೆ ಮಾಡಿದಲ್ಲಿ ಕೆಳಗೆ ನಿಮ್ಮ ಅರ್ಜಿಯು ಪ್ರಕಟವಾಗುತ್ತದೆ.
- ಅರ್ಜಿಯ ಪಕ್ಕದಲ್ಲಿ "Pay Now" link ಅನ್ನು ಒತ್ತಿದಲ್ಲಿ "Online payment" ಆಯ್ಕೆಗಳು ಮೂಡುತ್ತವೆ.

ಒಂದು ಬಾರಿ ನೋಂದಣಿ/ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆಗಳು ಉಂಟಾದಲ್ಲಿ ಸಹಾಯವಾಣಿ ಸಂಖ್ಯೆ: 7406086807 / 7406086801ಯನ್ನು ಸಂಪರ್ಕಿಸಲು ಸೂಚಿಸಿದೆ.

4. ಶುಲ್ಕ :- ಅರ್ಜಿ ಸಲ್ಲಿಸುವ ಎಲ್ಲಾ ಅಧಿಕಾರಿಗಳು ರೂ. 600/-ಅನ್ನು ಪಾವತಿಸತಕ್ಕದ್ದು.

| |
|---|
| ವಿಶೇಷ ಸೂಚನೆ:- ರೂ. 35/- ರ ಪ್ರಕ್ರಿಯೆ ಶುಲ್ಕ (processing fees)ವನ್ನು ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಪಾವತಿಸತಕ್ಕದ್ದು. ಪಾವತಿಸದಿದ್ದಲ್ಲಿ, ಅವರ ಅರ್ಜಿಯನ್ನುತಿರಸ್ಕರಿಸಲಾಗುವುದು. |

4.1 ಅಧಿಕಾರಿಗಳು ನಿಗದಿಪಡಿಸಿದ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು. ಒಮ್ಮೆ ಶುಲ್ಕವನ್ನುಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ . ಶುಲ್ಕವನ್ನುಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

5. ವಯೋಮಿತಿ:-

(i) ರಾಜ್ಯ ನಾಗರೀಕ ಸೇವಾ ವೃಂದದಲ್ಲಿ ಡೆಪ್ಯೂಟಿ ಕಲೆಕ್ಟರ್ (ಸಹಾಯಕ ಆಯುಕ್ತರು, ಕಂದಾಯ ಉಪ-ವಿಭಾಗ) ಹುದ್ದೆಗೆ ತತ್ಸಮಾನವೆಂದು ನಿಗದಿಪಡಿಸಿದ ರಾಜ್ಯ ಸರ್ಕಾರದ ಗ್ರೂಪ್ 'ಎ' ವೃಂದದ ಗೆಜೆಟೆಡ್ ಹುದ್ದೆಯಲ್ಲಿ ಜನವರಿ ಮಾಹೆಯ ಮೊದಲನೇ ದಿನದಂದು (01-01-2021) 08 ವರ್ಷಗಳಿಗೆ ಕಡಿಮೆ ಅಲ್ಲದ ನಿರಂತರ ಸೇವೆಯನ್ನು ಸಲ್ಲಿಸಿರತಕ್ಕದ್ದು.

(ii) ಅಭ್ಯರ್ಥಿಯ ವಯೋಮಿತಿ 2021ರ ಜನವರಿ ಮಾಹೆಯ ಮೊದಲನೇ ದಿನಕ್ಕೆ (01-01-2021) 56 ವರ್ಷಕ್ಕಿಂತ ಕಡಿಮೆ ಇರತಕ್ಕದ್ದು.

6. ಅರ್ಹತಾ ಷರತ್ತುಗಳು:-

| | |
|---|---|
| ಅ) | ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳನ್ನು ಹೊರತುಪಡಿಸಿ. |
| ಆ) | ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 330 ಎಸ್‌ಎಎಸ್ 1997, ದಿನಾಂಕ:01-12-2000ರ ಆದೇಶದಲ್ಲಿರುವಂತೆ ರಾಜ್ಯ ಸರ್ಕಾರದ ಎಲ್ಲಾ ಗ್ರೂಪ್-ಎ ಅಧಿಕಾರಿಗಳು (ಆದೇಶದ ಉದ್ಧೃತ ಭಾಗ ಈ ಕೆಳಗಿನಂತಿದೆ)<br>"In exercise of the powers conferred under sub regulation (iii) of Regulation 4(1) of the IAS (Appointment by selection) Regulations 1997 the Government are pleased to order that barring three services viz., (1) State Police Service (2)State Forest Service and (3) Judicial Service, all the group'A' posts in all the departments under the Government of Karnataka, are declared equivalent to the post of Deputy Collector (Assistant Commissioner of Revenue Sub-Division) in the State Civil Service for the limited purpose specified in Regulatin ibid" ಅದರಂತೆ (1) ರಾಜ್ಯ ಪೊಲೀಸ್ ಸೇವೆ (2) ರಾಜ್ಯ ಅರಣ್ಯಸೇವೆ (3) ನ್ಯಾಯಾಂಗ ಸೇವೆಗಳನ್ನು ಹೊರತುಪಡಿಸಿ, ರಾಜ್ಯ ನಾಗರೀಕ ಸೇವಾ ವೃಂದದಲ್ಲಿ ಡೆಪ್ಯೂಟಿ ಕಲೆಕ್ಟರ್ (ಸಹಾಯಕ ಆಯುಕ್ತರು, ಕಂದಾಯ ಉಪ-ವಿಭಾಗ) ಹುದ್ದೆಗೆ ತತ್ಸಮಾನವೆಂದು ನಿಗದಿಪಡಿಸಿದ ಕರ್ನಾಟಕ ರಾಜ್ಯ ಸರ್ಕಾರದ ಅಧೀನದಲ್ಲಿರುವ ಎಲ್ಲಾ ಗೆಜೆಟೆಡ್ ಗ್ರೂಪ್ 'ಎ' ವೃಂದದ ಅಧಿಕಾರಿಗಳು ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತಾರೆ. |
| ಇ) | ಯಾವ ಅಧಿಕಾರಿಗಳ ಮಾತೃ ಸಂಸ್ಥೆಯು ನಿಗಮ/ಕಾರ್ಪೊರೇಷನ್ /ಸ್ಥಳೀಯ ಸಂಸ್ಥೆಗಳು /ಸ್ವಾಯತ್ತ ಸಂಸ್ಥೆಗಳು ಆಗಿರುತ್ತದೆಯೋ ಅಂತಹ ಅಧಿಕಾರಿಗಳು ಅರ್ಹರಾಗಿರುವುದಿಲ್ಲ. |
| ಈ) | ರಾಜ್ಯ ನಾಗರೀಕ ಸೇವಾ ವೃಂದದಲ್ಲಿ ಡೆಪ್ಯೂಟಿ ಕಲೆಕ್ಟರ್ (ಸಹಾಯಕ ಆಯುಕ್ತರು, ಕಂದಾಯ ಉಪ-ವಿಭಾಗ) ಹುದ್ದೆಗೆ ತತ್ಸಮಾನವೆಂದು ನಿಗದಿಪಡಿಸಿದ ರಾಜ್ಯ ಸರ್ಕಾರದ ಗ್ರೂಪ್ 'ಎ' ವೃಂದದ ಗೆಜೆಟೆಡ್ ಹುದ್ದೆಯಲ್ಲಿ ಜನವರಿ ಮಾಹೆಯ ಮೊದಲನೇ ದಿನದಂದು (01-01-2021) 08 ವರ್ಷಗಳಿಗೆ ಕಡಿಮೆ ಅಲ್ಲದ ನಿರಂತರ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| ಉ) | ಅಭ್ಯರ್ಥಿಯ ವಯೋಮಿತಿ 2021 (select list) ರ ಜನವರಿ ಮಾಹೆಯ ಮೊದಲನೇ ದಿನಕ್ಕೆ (01-01-2021) 56 ವರ್ಷಕ್ಕಿಂತ ಕಡಿಮೆ ಇರತಕ್ಕದ್ದು. |

7. ಸ್ಪರ್ಧಾತ್ಮಕ ಪರೀಕ್ಷಾ ವಿಧಾನ:-

ಈ ಸ್ಪರ್ಧಾತ್ಮಕ ಪರೀಕ್ಷೆಯನ್ನು ಭಾರತೀಯ ನಾಗರೀಕ ಸೇವೆ (ಆಯ್ಕೆ ಮೂಲಕ ನೇಮಕಾತಿ) ನಿಯಮಾವಳಿಗಳು 1997ರನ್ವಯ ಹಾಗೂ ಕಾಲ ಕಾಲಕ್ಕೆ ತಿದ್ದುಪಡಿಯಾದ ನಿಯಮಗಳನ್ವಯ ನಡೆಸಲಾಗುತ್ತದೆ.

1) ಸ್ಪರ್ಧಾತ್ಮಕ ಪರೀಕ್ಷೆಯು ಪತ್ರಿಕೆ -1 ಮತ್ತು ಪತ್ರಿಕೆ -2 ಎಂಬ ಎರಡು ಪ್ರಶ್ನೆಪತ್ರಿಕೆಗಳನ್ನೊಳಗೊಂಡಿರುತ್ತದೆ. ಪ್ರತಿ ಪತ್ರಿಕೆಯು 2.00 (ಎರಡು) ಗಂಟೆಗಳ ಅವಧಿಯದ್ದಾಗಿರುತ್ತದೆ.
2) ಪ್ರಶ್ನೆ ಪತ್ರಿಕೆಯನ್ನು ಕನ್ನಡ ಮತ್ತು ಆಂಗ್ಲಭಾಷೆ ಎರಡರಲ್ಲೂ ಸಿದ್ಧಪಡಿಸಲಾಗುತ್ತದೆ.
3) ಪ್ರಶ್ನೆ ಪತ್ರಿಕೆಯು ವಸ್ತುನಿಷ್ಠ (Objective type or multiple choice ) ಮಾದರಿಯದ್ದಾಗಿರುತ್ತದೆ.
4) ಪ್ರತಿ ಪ್ರಶ್ನೆ ಪತ್ರಿಕೆಯು 100 ಪ್ರಶ್ನೆಗಳನ್ನು ಒಳಗೊಂಡಿದ್ದು, ಪ್ರತಿ ಪ್ರಶ್ನೆಗೆ 02 (ಎರಡು) ಅಂಕಗಳನ್ನು ನಿಗದಿಪಡಿಸಲಾಗಿರುತ್ತದೆ.
5) ಪ್ರತಿ ಪ್ರಶ್ನೆಯು 04 (ನಾಲ್ಕು) ಆಯ್ಕೆಗಳನ್ನು ಒಳಗೊಂಡಿರುತ್ತದೆ.

**6) ತಪ್ಪು ಉತ್ತರಗಳಿಗೆ ವಿಧಿಸಲಾಗುವ ದಂಡನೆಯ ವಿವರ:-**

**(i)** **ಪ್ರತಿ ಪ್ರಶ್ನೆಗೆ ಉತ್ತರಕ್ಕಾಗಿ ನಾಲ್ಕು ಆಯ್ಕೆಗಳಿದ್ದು, ಪ್ರತಿ ಪ್ರಶ್ನೆಗೆ ಅಭ್ಯರ್ಥಿಯು ತಪ್ಪು ಉತ್ತರ ನೀಡಿದಲ್ಲಿ ಆ ಪ್ರಶ್ನೆಗೆ ನಿಗದಿಪಡಿಸಲಾದ ಅಂಕಗಳಲ್ಲಿ ¼ ರಷ್ಟು ಅಂಕಗಳನ್ನು ದಂಡದ ರೂಪದಲ್ಲಿ ಕಳೆಯಲಾಗುವುದು.**

**(ii)** **ಅಭ್ಯರ್ಥಿಯು ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರವನ್ನುನೀಡಿದ್ದಲ್ಲಿ ಅದರಲ್ಲಿ ಒಂದು ಉತ್ತರವು ಸರಿಯಾಗಿದ್ದರೂ ಸಹ ಅದನ್ನು ತಪ್ಪು ಉತ್ತರ ಎಂದು ಪರಿಗಣಿಸಲಾಗುವುದು. ಅಲ್ಲದೆ, ಮೇಲೆ ತಿಳಿದಂತೆಯೇ ಆ ಪ್ರಶ್ನೆಗೆ ದಂಡವನ್ನು ವಿಧಿಸಲಾಗುವುದು.**

**(iii)** **ಅಭ್ಯರ್ಥಿಯು ಯಾವುದೇ ಪ್ರಶ್ನೆಗೆ ಉತ್ತರಿಸದೆ ಖಾಲಿ ಬಿಟ್ಟಲ್ಲಿ ಅಂದರೆ ಉತ್ತರವನ್ನು ನೀಡದಿದ್ದಲ್ಲಿ ಆ ಪ್ರಶ್ನೆಗೆ ಯಾವುದೇ ದಂಡವನ್ನು ವಿಧಿಸಲಾಗುವುದಿಲ್ಲ.**

**8. ಸ್ಪರ್ಧಾತ್ಮಕ ಪರೀಕ್ಷೆಯ ಪಠ್ಯಕ್ರಮ (Syllabus of Exam):-**

| **ಸಾಮಾನ್ಯ ಅಧ್ಯಯನ ಪತ್ರಿಕೆ-I (GENERAL STUDIES PAPER-I)** | |
|---|---|
| **Sl. No.** | **ವಿಷಯಗಳು (Topics)** |
| 01 | ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಾಮುಖ್ಯತೆಗೆ ಸಂಬಂಧಿಸಿದ ಪ್ರಚಲಿತ ವಿದ್ಯಾಮಾನಗಳು (Current events of importance at International, National and State level). |
| 02 | ಇತಿಹಾಸ ಮತ್ತು ಪರಂಪರೆಗಳು (ಭಾರತ ಹಾಗೂ ಕರ್ನಾಟಕ) (History and Cultural Heritage (India and Karnataka). |
| 03 | ಪ್ರಚಲಿತ ಸನ್ನಿವೇಶದಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಅರ್ಥಶಾಸ್ತ್ರದ ಪರಿಕಲ್ಪನೆ (Concept of Economics in the Current Scenario at National and State level) . |
| 04 | ಭಾರತ ಸಂವಿಧಾನದ ಅವಲೋಕನ (Overview of Indian Constitution). |
| 05 | ಭೂಗೋಳ, ಪರಿಸರ ವಿಜ್ಞಾನ, ಜೀವವೈವಿಧ್ಯತೆ ಮತ್ತು ಹವಾಮಾನ ಬದಲಾವಣೆಯಲ್ಲಿನ ಸಾಮಾನ್ಯ ಜ್ಞಾನ (Geography, General issues on Environmental ecology, Bio-diversity and Climate Change). |
| **ಸಾಮಾನ್ಯ ಅಧ್ಯಯನ ಪತ್ರಿಕೆ-II (GENERAL STUDIES PAPER-II)** | |
| 01 | ಪ್ರಮುಖವಾದ ಅಂತರರಾಷ್ಟ್ರೀಯ ಸಂಸ್ಥೆಗಳು, ಏಜೆನ್ಸೀಸ್ ಮತ್ತು ಅವುಗಳ ರಚನೆ, ಕರ್ತವ್ಯಗಳು. (Important International Institutions, agencies and their structure, mandate.) |
| 02 | ಭಾರತದ ಅಂತರರಾಷ್ಟ್ರೀಯ ಸಂಬಂಧಗಳು (India's International Relations). |
| 03 | ವಿಜ್ಞಾನ ಮತ್ತು ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಬಾಹ್ಯಾಕಾಶ, ಕಂಪ್ಯೂಟರ್ ಗಳು, ರೋಬೋಟಿಕ್ಸ್, ನ್ಯಾನೋ-ಟೆಕ್ನಾಲಜಿ, ಜೈವಿಕ ತಂತ್ರಜ್ಞಾನ ಮತ್ತು ರಕ್ಷಣಾ ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಸಾಮಾನ್ಯ ಜ್ಞಾನ - ಅಭಿವೃದ್ಧಿ ಹಾಗೂ ಅನ್ವಯಿಸುವಿಕೆ (Science and Technology, Awareness in the fields of IT, Space, Computers, robotics, Nano-technology, Bio-technology, Defence technology- Developments and their applications.) |
| 04 | ಸಾಮಾನ್ಯ ವಿಜ್ಞಾನ (General Science). |
| 05 | ತಾರ್ಕಿಕ ಮತ್ತು ವಿಶ್ಲೇಷಣಾತ್ಮಕ ಸಾಮರ್ಥ್ಯ (Logical reasoning and analytical ability). |

9. **ಶ್ರೇಣಿ ಪಟ್ಟಿ:-**

**(i)** ಸದರಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎಲ್ಲಾ ಅಧಿಕಾರಿಗಳು ಪಡೆದ ಅಂಕಗಳೊಂದಿಗೆ ಶ್ರೇಣಿ ಪಟ್ಟಿಯನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು.

**(ii)** ಕರ್ನಾಟಕ ಲೋಕಸೇವಾ ಆಯೋಗದಿಂದ ಪಡೆದಂತಹ ಶ್ರೇಣಿಯ ಪಟ್ಟಿ ಸ್ವೀಕೃತಗೊಂಡ ನಂತರ, ರಾಜ್ಯ ಸರ್ಕಾರವು ಅಧಿಕಾರಿಗಳು ಅರ್ಹರೇ ಎಂಬುದನ್ನು ಪರಿಶೀಲಿಸಲು ಅರ್ಹ ಅಧಿಕಾರಿಗಳ ಸಿಆರ್ ದಸ್ತಾವೇಜಿನ ಜೊತೆಗೆ ನಿಗದಿತ ಪ್ರೊ-ಫಾರ್ಮ್ ನಲ್ಲಿ ಆಯಾ ಇಲಾಖೆಗಳಿಂದ ಅಭ್ಯರ್ಥಿಗಳ ಎಸಿಆರ್ ಗಳ ಸಾರಾಂಶವನ್ನು ಪಡೆಯುತ್ತದೆ. ಕೇಂದ್ರ ಸರ್ಕಾರ /ಕೇಂದ್ರ ಲೋಕಸೇವಾ ಆಯೋಗದ ಸೂಚನೆಗಳನ್ವಯ ರಾಜ್ಯ ಸರ್ಕಾರವು ಭಾರತೀಯ ಆಡಳಿತ ಸೇವೆ (ಆಯ್ಕೆಯ ಮೂಲಕ ನೇಮಕಾತಿ) ನಿಯಮಗಳು 1997ರಲ್ಲಿನ ನಿಬಂಧನೆಗಳ ಪ್ರಕಾರ ಕೇಂದ್ರ ಸರ್ಕಾರ/ಕೇಂದ್ರ ಲೋಕಸೇವಾ ಆಯೋಗಕ್ಕೆ ಅರ್ಹತೆಯ ಕ್ರಮದಲ್ಲಿ ಹೆಸರುಗಳನ್ನು ಶಿಫಾರಸ್ಸು ಮಾಡಲಾಗುತ್ತದೆ.

10 . **ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:-**

| | | |
|---|---|---|
| ಕೇಂದ್ರ ಕಛೇರಿಯ ಮಾಹಿತಿ ಕೇಂದ್ರ | : | **080-30574957/ 30574901** |
| ಪರೀಕ್ಷಾಶಾಖೆ-1 | : | **080-30574935** |
| ಸಹಾಯವಾಣಿ ಸಂಖ್ಯೆ | : | **7406086807 / 7406086801** |

11. **ದುರ್ನಡತೆ:-**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದುಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತುಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ, ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಸಹಿ/-

(ಸುರಳ್ಕರ್ ವಿಕಾಸ್ ಕಿಶೋರ್)

ಕಾರ್ಯದರ್ಶಿ,

ಕರ್ನಾಟಕ ಲೋಕಸೇವಾ ಆಯೋಗ.